ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದಲ್ಲಿ ಆಯಾಯ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ನಿರ್ವಹಿಸುವರು.

ಇ) ಯಿಂದ ಉ)

ಹೌದು, 2003–04ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಗ್ರಾಮಾಂತರ ಪ್ರದೇಶದ ಹಳೆಯ ದೇವಸ್ಥಾನಗಳನ್ನು ಮಸೀದಿಗಳನ್ನು, ಚರ್ಚ್‌ಗಳನ್ನು ಗುರುದ್ವಾರಗಳನ್ನು ಹಾಗೂ ಮಸೀದಿಗಳನ್ನು ದುರಸ್ಥಿತಿಗೊಳಿಸಲು ಮುಖ್ಯ ಮಂತ್ರಿಗಳ ನಿಧಿಯನ್ನು ಸ್ಥಾಪಿಸುವುದಾಗಿ ಪ್ರಕಟಿಸಿರುತ್ತಾರೆ. ಇದರ ಪ್ರಾರಂಭಿಕ ನಿಧಿ 1.00 ಕೋಟಿ ರೂಪಾಯಿಗಳಾಗಿರುತ್ತವೆ. ಈ ನಿಧಿಯಿಂದ ಒಂದು ಸಂಸ್ಥೆಗೆ ಒಂದು ಬಾರಿಗೆ ಮಾತ್ರ ರೂ. 10,000 ಗಳಿಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗುವುದು. ಸಾರ್ವಜನಿಕ ವಂತಿಕೆಯಿಂದ ನಿಧಿಯನ್ನು ಬಲಗೊಳಿಸಲಾಗುವುದು.

ಪಿರಿಯಾ ಪಟ್ಟಣದ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಇಲಖೆಯ ವತಿಯಿಂದ ಅಳವಡಿಸಲಾಗಿರುವ ಯೋಜನೆಗಳು

4150 (4609) : ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳಲ್ಲಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ; (ವಿವರವನ್ನು ಪ್ರತ್ಯೇಕವಾಗಿ ವರ್ಷವಾರು ನೀಡುವುದು)

ಆ) ಯೋಜನೆ ಜಾರಿಗೊಳಿಸಿದ ನಂತರ ಅದನ್ನು ಪೂರ್ಣಗೊಳಿಸಲಾಗಿದೆಯೆ; ಅಂತಹ ಪ್ರಕರಣಗಳ ವಿವರ ನೀಡುವುದು;

ಇ) ಮೇಲ್ಕಂಡ ಇಲಾಖಾವತಿಯಿಂದ ಗ್ರಾಮಾಂತರ ಪ್ರದೇಶದ ಸಾರ್ವಜನಿಕರಿಗೆ ನೀಡಲಾಗುವ ಸೌಲಭ್ಯಗಳು ಯಾವುದು;

ಈ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಯೋಜನೆಗಳ ಜಾರಿಯಲ್ಲಿ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಆ ಮತ್ತು ಇ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದ ಕಾರ್ಯಕ್ರಮಗಳನ್ನು ಮತ್ತು ಪೂರ್ಣಗೊಂಡವನ್ನು ಅನುಬಂಧ–1ರಲ್ಲಿ ನೀಡಿದೆ.

ಈ) ಯೋಜನೆಯ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4609ಕ್ಕೆ ಅನುಬಂಧ – ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಕಾರ್ಯಕ್ರಮಗಳ ವಿವರಗಳು

ಕ್ರ. ಸಂ.	ಯೋಜನೆಗಳು	2000–01 ಫಲಾನುಭವಿಗಳ ಸಂಖ್ಯೆ	2001–02 ಖರ್ಚು ಮಾಡಿರುವ ಹಣ	2002–03 ಫಲಾನುಭವಿಗಳ ಸಂಖ್ಯೆ	ಖರ್ಚು ಮಾಡಿರುವ ಹಣ	ಫಲಾನುಭವಿಗಳ ಸಂಖ್ಯೆ	ಖರ್ಚು ಮಾಡಿರುವ ಹಣ
1	2	3	4	5	6	7	8
1.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	290	2068327	295	2441535	300	2797922
2.	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ನೀಡಿಕೆ	414	35150	742	64250	891	77025
3.	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ನೀಡಿಕೆ	489	146700	537	161500	370	111000
4.	ಹೆಚ್ಚುವರಿ ಬೋಜನಾ ವೆಚ್ಚ	9	9855	15	11997	8	8358
5.	ವಿದ್ಯಾರ್ಥಿನಿಲಯಗಳಲ್ಲಿದ್ದು, ಪ್ರಥಮ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ	11	1450	9	1050	5	1000
6.	ಮಾಂಗಲ್ಯ ಭಾಗ್ಯ	1	5000	4	20000	1	5000
7.	ಬೆಳ್ಳಬೆಳಕು ಯೋಜನೆ	30	600000	–	–	–	–
	ಅಲ್ಪಸಂಖ್ಯಾತರ ಇಲಾಖೆ :						
1.	ಮತೀಯ ಅಲ್ಪಸಂಖ್ಯಾತರ ಖಾಸಗಿ ವಿದ್ಯಾರ್ಥಿನಿಲಯಕ್ಕೆ ಅನುದಾನ ನೀಡಿಕೆ	40	130244	75	261625	75	260859